1	2	3	4	5	6	7
2.	ಭದ್ರಾವತಿ ಅ.ಪ	5234	–	998	26032	80398
	ಭದ್ರಾವತಿ ಗ್ರಾ	32233	–	2217	13684	
3.	ಸಾಗರ ಪಟ್ಟಣ	1281	–	785	11070	41034
	ಸಾಗರ ಗ್ರಾ	15134	–	2418	10336	
4.	ಶಿಕಾರಿಪುರ ಪಟ್ಟಣ	1000	–499	4484		42200
	ಶಿಕಾರಿಪುರ ಗ್ರಾಮ	27740	–	2402	6075	
5.	ತೀರ್ಥಹಳ್ಳಿ ಪಟ್ಟಣ	622	–	217	2623	32432
	ತೀರ್ಥಹಳ್ಳಿ ಗ್ರಾ	16916	–	1440	10614	
6.	ಹೊಸ ನಗರ	14478	–1648	8341	24467	
7.	ಸೊರಬ	24547	–	1964	11044	37555
	ಒಟ್ಟು	**176935**	–	**17206**	**159834**	**353875**

ಉದ್ಯೋಗಿನಿ ಯೋಜನೆಯ ಫಲಾನುಭವಿಗಳ ಬಗ್ಗೆ

4218 (4888) : ಶ್ರೀ ದಿನೇಶ್ ಗುಂಡುರಾವ್ (ಗಾಂಧೀನಗರ) ಮಾನ್ಯ ಮಹಿಳಾ ಹಾಗೂ ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 2002–2003ನೇ ಸಾಲಿನಲ್ಲಿ ಉದ್ಯೋಗಿನಿ ಯೋಜನೆಯಡಿ ಗಾಂಧಿನಗರ ಕ್ಷೇತ್ರದಲ್ಲಿ ಎಷ್ಟು ಜನ ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿತ್ತು;

ಆ) ಇವರುಗಳಲ್ಲಿ ಎಷ್ಟು ಜನ ಫಲಾನುಭವಿಗಳಿಗೆ ಬ್ಯಾಂಕುಗಳವರು ಸಾಲದ ಹಣ ಬಿಡುಗಡೆ ಮಾಡಿರುತ್ತಾರೆ;

ಇ) ಬ್ಯಾಂಕುಗಳಿಂದ ಹಣ ಬಿಡುಗಡೆ ಮಾಡಲು ಆಗುತ್ತಿರುವ ತೊಂದರೆಗಳು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಈ ಸಮಸ್ಯೆ ಪರಿಹಾರಕ್ಕೆ ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು)

ಅ) ನಾಲ್ಕು

ಆ) ಒಬ್ಬರಿಗೆ

ಇ) ಬಂದಿದೆ

ಈ) ಈ ವಿಷಯವನ್ನು ಸ್ಟೇಟ್ ಲೆವಲ್ ಬ್ಯಾಂಕರ್ಸ್ ಕಮೀಟಿಯ ಮುಂದೆ ತಂದು ಉದ್ಯೋಗಿನಿ ಯೋಜನೆಯಡಿ ರೂ. 50,000/– ರವರೆಗೆ ಸಾಲ ಮಂಜೂರು ಮಾಡಲು ಶ್ಯೂರಿಟಿಯನ್ನು / ಗ್ಯಾರಂಟಿಯನ್ನು ನೀಡುವಂತೆ ಒತ್ತಾಯಿಸಬಾರದೆಂದು ಬ್ಯಾಂಕರ್‌ಗಳಿಗೆ ಸೂಚನೆಯನ್ನು ನೀಡಬೇಕೆಂದು ಕೋರಲಾಗುವುದು.

ಉಡುಪಿ ಜಿಲ್ಲೆಯ ಕೃಷಿ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳ ಬಗ್ಗೆ

4219 (4836) : ಶ್ರೀ ಗೋಪಾಲ ಭಂಡಾರಿ ಹೆಚ್ (ಕಾರ್ಕಳ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉಡುಪಿ ಜಿಲ್ಲೆಯಲ್ಲಿನ ಕೃಷಿ ಇಲಾಖೆಯಲ್ಲಿ ಯಾವ ಯಾವ ಹುದ್ದೆಗಳು ಖಾಲಿಯಿದೆ; ತಾಲ್ಲೂಕುವಾರು ಅಂಕಿ ಅಂಶಗಳು ಒದಗಿಸುವುದು;

ಆ) ಇತ್ತೀಚೆಗೆ ಹೊಸ ಭತ್ತದ ತಳಿಗಳನ್ನು ಉಡುಪಿ, ದಕ್ಷಿಣ ಕನ್ನಡ ಮತ್ತು ಕರಾವಳಿ ಜಿಲ್ಲೆಗೆ ಒಗ್ಗುವಂತಹದ್ದು ಯಾವುದಾದರೂ ಬಿಡುಗಡೆಗೊಳಿಸಲಾಗಿದೆಯೇ, ಹಾಗಿದ್ದರೆ, ವಿವರ ಒದಗಿಸುವುದು;

ಇ) ಉಡುಪಿ ಜಿಲ್ಲೆಯ ಕಾರ್ಕಳ, ಉಡುಪಿ, ಕುಂದಾಪುರ, ತಾಲ್ಲೂಕಿನಲ್ಲಿ ಯಾವ ಯಾವ ಬೆಳೆಯನ್ನು ಎಷ್ಟೆಷ್ಟು ಎಕರೆಯಲ್ಲಿ ಬೆಳೆಸುತ್ತಾರೆ. ತಾಲ್ಲೂಕುವಾರು ವಿವರ ಒದಗಿಸುವುದು?

ಶ್ರೀ ವಿ.ಎಸ್. ಕೌಜಲಗಿ (ಕೃಷಿ ಸಚಿವರು)

ಅ) ಉಡುಪಿ ಜಿಲ್ಲೆಯಲ್ಲಿನ ಕೃಷಿ ಇಲಾಖೆಯಲ್ಲಿ ಈ ಕೆಳಕಂಡ ಹುದ್ದೆಗಳು ಖಾಲಿ ಇದ್ದು ತಾಲ್ಲೂಕುವಾರು ಮಾಹಿತಿ ಈ ಕೆಳಕಂಡಂತಿದೆ.

ಹುದ್ದೆ	ಉಡುಪಿ	ಕುಂದಾಪುರ	ಕಾರ್ಕಳ
ಸಹಾಯಕ ಕೃಷಿ ನಿರ್ದೇಶಕರು (ಜಕ್ಕನಿ ಕಛೇರಿ ಮತ್ತು ಉಡುಪಿ ಕಛೇರಿ)	4	1	–
ಕೃಷಿ ಅಧಿಕಾರಿಗಳು	11	5	4
ಸಹಾಯಕ ಕೃಷಿ ಅಧಿಕಾರಿ (ರೈತ ಮಹಿಳೆ)	–	–	1
ಅಧೀಕ್ಷರು	1	–	1
ಪ್ರಥಮ ದರ್ಜೆ ಸಹಾಯಕರು	1	2	1
ದ್ವಿತೀಯ ದರ್ಜೆ ಸಹಾಯಕರು	–	2	–
ಬೆರಳಚ್ಚುಗಾರರು	1	–	–
ಕೃಷಿ ಸಹಾಯಕರು	8	8	8
ವಾಹನ ಚಾಲಕರು	2	1	–
ಗ್ರೂಪ್ – ಡಿ	3	–	2
ಒಟ್ಟು :	31	19	18

ಆ) ವಲಯ – 10ರ ಉಡಪಿ, ದಕ್ಷಿಣ ಕನ್ನಡ ಮತ್ತು ಕರಾವಳಿ ಜಿಲ್ಲೆಗೆ ಒಗ್ಗುವಂತಹ ಭತ್ತದ ತಳಿ ಕೆ.ಸಿ.ಪಿ–1 ಇತ್ತೀಚೆಗೆ ಬಿಡುಗಡೆಯಾಗಿದೆ.